(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 31–01–2025)

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಎಸ್ ಬಿ ಬಿ ವಕೀಲರಿಂದ,**

ನನ್ನ ಕಳೆದ ಪಾಟೀ ಸವಾಲಿನಲ್ಲಿ ಹೇಳಿದಂತೆ ದಾವಾ ಆಸ್ತಿಯಲ್ಲಿರುವ ಮೈಸೂರು ಕೆಫೆ ಇರುವ ಕಟ್ಟಡದಲ್ಲಿ ನನ್ನ ಮತ್ತು ಪ್ರತಿವಾದಿಯ ಪಾಲಿಗೆ ಬಂದ ಕಟ್ಟಡದ ಮಧ್ಯೆ ಇರುವ ನೆಲ ಅಂತಸ್ತು ಮತ್ತು ಮೇಲಂತಸ್ತಿಗೆ ಹೋಗುವ ಪ್ಯಾಸೇಜಿನ ಉದ್ದ ಅಗಲವನ್ನು ನಾನು ಅಳತೆ ಮಾಡಿರುವುದಿಲ್ಲ. ಸದ್ರಿ ಕಟ್ಟಡದ ನೆಲ ಅಂತಸ್ತು ಮತ್ತು ಮೇಲಂತಸ್ತಿಗೆ ಹೋಗುವ ಪ್ಯಾಸೇಜಿನ ಉದ್ದ 35 ಫೂಟ್ ಹಾಗೂ 4.3 ಫೂಟ್ ಅಗಲ ಇರುತ್ತದೆ ಎಂದರೆ ಸರಿಯಲ್ಲ. ಸದ್ರಿ ಪ್ಯಾಸೇಜಿನ ಪೂರ್ವ ಭಾಗದ ಗೋಡೆ ಪ್ರತಿವಾದಿಗೆ ಸಂಬಂಧಿಸಿದ್ದು ಹಾಗೆ ಪಶ್ಚಿಮ ಭಾಗದ ಗೋಡೆ ನನಗೆ ಸೇರಿದ್ದು ಎಂದರೆ ಸರಿ. ಸದ್ರಿ ಪ್ಯಾಸೇಜಿಗೆ ಹೋಗಲು ಉತ್ತರ ದಿಕ್ಕಿನಲ್ಲಿ ಮಾತ್ರ ಪ್ರವೇಶ ದ್ವಾರ ಇರುತ್ತದೆ ಎಂದರೆ ಸರಿಯಲ್ಲ ಮೊದಲು ಎರಡೂ ಕಡೆ ಪ್ರವೇಶ ದ್ವಾರ ಇದ್ದು ಈಗ ಪ್ರತಿವಾದಿ ಕಟ್ಟಡ ಕಟ್ಟಿದ್ದರಿಂದ ಉತ್ತರ ದಿಕ್ಕಿನಲ್ಲಿ ಅಂದರೆ ನನಗೆ ಸೇರಿದ ಜಾಗದಲ್ಲಿ ಮಾತ್ರ ಪ್ರವೇಶ ದ್ವಾರ ಇರುತ್ತದೆ ಎಂದು ಸಾಕ್ಷಿ ಹೇಳಿರುತ್ತಾರೆ. ಸದ್ರಿ ಪ್ಯಾಸೇಜಿನ ಪ್ರವೇಶ ದ್ವಾರದ ಪೂರ್ವದ ಗೋಡೆಯಾಗಲೀ ಮತ್ತು ಪಶ್ಚಿಮದ ಗೋಡೆಯಾಗಲೀ ತೆಗೆದಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಪ್ರತಿವಾದಿಗೆ ಸೇರಿದ ಕಟ್ಟಡದ ಭಾಗಕ್ಕೆ ಹೋಗಲು ಸದ್ರಿ ಪ್ಯಾಸೇಜಿನ ಉತ್ತರ ದಿಕ್ಕಿನಲ್ಲಿ ಪ್ರವೇಶ ದ್ವಾರ ಮಾತ್ರ ಇತ್ತು ಎಂದರೆ ಸರಿಯಲ್ಲ ಮೊದಲು ಪ್ರತಿವಾದಿಗೆ ಸೇರಿದ ಕಟ್ಟಡದ ಭಾಗದಲ್ಲಿಯೂ ಸಹ ಪ್ರವೇಶ ದ್ವಾರ ಇತ್ತು. ಉತ್ತರ ದಿಕ್ಕಿನಲ್ಲಿರುವ ಪ್ಯಾಸೇಜಿನ ಪ್ರವೇಶ ದ್ವಾರದಿಂದ ದಕ್ಷಿಣ ದಿಕ್ಕಿನಲ್ಲಿರುವ ಪ್ರತಿವಾದಿಯ ಕಟ್ಟಡದ ಭಾಗಕ್ಕೆ ಹೋಗುವ ಜಾಗವನ್ನು ಕಲ್ಲು ಕಟ್ಟಿ ಬಂದ್ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಹೌದು ಪ್ರತಿವಾದಿಯು ತನ್ನ ಕಟ್ಟಡದ ಭಾಗವನ್ನು ಪೂರ್ಣವಾಗಿ ಕೆಡವಿದ್ದರಿಂದ ಆ ಜಾಗ ಸಂಪೂರ್ಣವಾಗಿ ತೆರೆದಿದ್ದರಿಂದ ಸುರಕ್ಷತೆಯ ದೃಷ್ಟಿಯಿಂದ ಸದ್ರಿ ಭಾಗವನ್ನು ಕಲ್ಲಿನಿಂದ ಕಟ್ಟಿ ಮುಚ್ಚಿರುತ್ತೇನೆ ಎಂದು ಹೇಳಿರುತ್ತಾರೆ. ಸದ್ರಿ ಪ್ಯಾಸೇಜಿನ ಪಶ್ಚಿಮಕ್ಕೆ ಮತ್ತು ನನಗೆ ಸೇರಿದ ಕಟ್ಟಡದ ಭಾಗದ ಹಿಂಬದಿ ಅಂದರೆ ದಕ್ಷಿಣ ಭಾಗದಲ್ಲಿ ಪ್ರತಿವಾದಿಗೆ ಸೇರಿದ ಎರಡು ಕೊಠಡಿಗಳು ಇರುತ್ತವೆ ಎಂದರೆ ಸರಿ. ಸದ್ರಿ ಕೊಠಡಿಗೆ ಹೋಗುವ ಪ್ಯಾಸೇಜಿನಲ್ಲಿರುವ ದಾರಿಯನ್ನು ನಾನು ಈ ದಾವೆ ದಾಖಲಿಸಿದ ನಂತರ ಕಲ್ಲನ್ನು ಕಟ್ಟಿ ಮುಚ್ಚಿರುತ್ತೇನೆ ಎಂದರೆ ಹೌದು ಸುರಕ್ಷತೆಯ ದೃಷ್ಟಿಯಿಂದ ಮುಚ್ಚಿರುತ್ತೇನೆ. ಅದೇ ರೀತಿ ಸದ್ರಿ ಎರಡು ಕೊಠಡಿಗಳ ಕೆಳ ಅಂತಸ್ತಿನಲ್ಲಿರುವ ಪ್ಯಾಸೇಜನ್ನು ಸಹ ನಾನು ಬೀಗ ಹಾಕಿ ಮುಚ್ಚಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಜಾಗದ ಪ್ಯಾಸೇಜಿಗೆ ಬೀಗ ಹಾಕಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನಗೆ ಮತ್ತು ಪ್ರತಿವಾದಿಗೆ ಬಂದ

ದಾವಾ ಆಸ್ತಿಯಲ್ಲಿರುವ ಕಟ್ಟಡದಲ್ಲಿರುವ ಪ್ಯಾಸೇಜ್ ನನಗೆ ಮತ್ತು ಪ್ರತಿವಾದಿಗೆ ಇರುವ ಜಂಟಿ ಹಕ್ಕಿನ ಸ್ಥಳ ಎಂದರೆ ಸರಿಯಲ್ಲ.

2. ಪ್ರತಿವಾದಿಯು ತನ್ನ ಪಾಲಿಗೆ ಬಂದ ಹಳೆಯ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ಕಟ್ಟಲು ಭಟ್ಕಳ ಪುರಸಭೆಯಿಂದ ಪರವಾನಿಗೆ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯು ತನ್ನ ಪಾಲಿಗೆ ಬಂದ ಕಟ್ಟಡದ ಭಾಗವನ್ನು ಸಂಪೂರ್ಣವಾಗಿ ಕೆಡವಿ ಹೊಸದಾಗಿ ಕಟ್ಟಡ ಕಟ್ಟಿರುತ್ತಾರೆ. ಸದ್ರಿ ಹೊಸ ಕಟ್ಟಡದ ಉದ್ದ ಅಗಲ ಎಷ್ಟು ಎಂದು ಗೊತ್ತಿಲ್ಲ. ಪ್ರತಿವಾದಿಯು ಹೊಸ ಕಟ್ಟಡ ಕಟ್ಟುವಾಗ ಅದರ ಪಶ್ಚಿಮದ ಭಾಗವನ್ನು ಕಟ್ಟಲು ಪ್ರಾರಂಭಿಸಿದಾಗ ಈ ದಾವೆಯನ್ನು ತಂದಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಭಾಗದ ಕಟ್ಟಡದ ಸಂಬಂಧ ಈ ದಾವೆ ದಾಖಲಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

3. ಪ್ರತಿವಾದಿಯ ಕಟ್ಟಡ ಪೂರ್ವದ ಅಂಚಿನಿಂದ ಪಶ್ಚಿಮಕ್ಕೆ ಇರುವ ಕಟ್ಟಡದ ಉದ್ದ ಅಗಲ ನನಗೆ ಗೊತ್ತಿಲ್ಲ ಆದರೆ ಅದರ ಚಕ್ಕುಬಂದಿ ಗೊತ್ತಿರುತ್ತದೆ. ಪ್ರತಿವಾದಿಯು ತನ್ನ ಪಾಲಿಗೆ ಬಂದ ಕಟ್ಟಡದ 700 ಚದರ್ ಅಡಿ ಆಗುವಷ್ಟು ಮಾತ್ರ ಕಟ್ಟಡ ಕೆಡವಿ ಹೊಸದಾಗಿ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಂತರ ಪ್ರತಿವಾದಿಯು ಆ ಹೊಸ ಕಟ್ಟಡದ ಅವರಿಗೆ ಸೇರಿದ ಪಶ್ಚಿಮ ದಿಕ್ಕಿನಲ್ಲಿ ಕಟ್ಟಡವನ್ನು ಕಟ್ಟುತ್ತಿದ್ದಾಗ ನಾನು ಈ ದಾವೆ ತಂದಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಜಾಗಕ್ಕೆ ಮಾತ್ರ ನಾನು ದಾವೆ ದಾಖಲಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನನ್ನ ಪಾಲಿಗೆ ಬಂದ ಜಾಗದಲ್ಲಿರುವ ಕಟ್ಟಡದ ಉದ್ದ ಅಗಲದ ಅಳತೆ ನನಗೆ ಗೊತ್ತಿಲ್ಲದೇ ಇದ್ದರೂ ಸಹ ಪ್ರತಿವಾದಿ ತನ್ನ ಪಾಲಿಗೆ ಬಂದ ಕಟ್ಟಡದ ಭಾಗದಲ್ಲಿ ಹೊಸ ಕಟ್ಟಡ ಕಟ್ಟಬಾರದು ಎಂಬ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಅವರ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಈ ದಾವೆಯಲ್ಲಿ ತನಗೆ ಸೇರಿದ ಕಟ್ಟಡದ ಕ್ಷೇತ್ರದಲ್ಲಿ ಮಾತ್ರ ನನ್ನ ಕಟ್ಟಡಕ್ಕೆ ಯಾವುದೇ ತೊಂದರೆ ಆಗದಂತೆ ಕಟ್ಟಡ ಕಟ್ಟುತ್ತೇನೆ ಎಂದು ದಿನಾಂಕ 10.02.2021 ರಂದು undertaking ಮಾಡಿ ಮೆಮೊ ಕೊಟ್ಟಿದ್ದರು ಎಂದರೆ ಹೌದು. ಪ್ರತಿವಾದಿಯು ಈ ದಾವೆ ದಾಖಲಿಸುವ ಪೂರ್ವದಲ್ಲಿ ತನ್ನ ಪಾಲಿನ ಕಟ್ಟಡದ ಜಾಗದಲ್ಲಿ ಕಟ್ಟಡ ಕೆಡವಿ ಹೊಸ ಕಟ್ಟಡ ಕಟ್ಟುವುದನ್ನು ನನಗೆ ತಿಳಿಸಿದ್ದರು ಎಂದರೆ ಸರಿ. ಪ್ರತಿವಾದಿಯ ಹೊಸ ಕಟ್ಟಡದ ಕಾಲು ಅಂಶ ಮಾತ್ರ ಕೆಲಸ ಆಗಿದ್ದು ಇನ್ನೂ ಮುಕ್ಕಾಲು ಭಾಗ ಕಟ್ಟಡ ಕಟ್ಟಲು ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4. ಪ್ರತಿವಾದಿಯು ಪ್ರಸ್ತುತ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಹೌದು. ಪ್ರತಿವಾದಿಯು ತಾನು ಹೊಸದಾಗಿ ಕಟ್ಟಿದ ಹೊಸ ಕಟ್ಟಡದ ಪಶ್ಚಿಮ ಭಾಗದಲ್ಲಿ ಉಳಿದಿರುವ

ಜಾಗದಲ್ಲಿ ತನಗೆ ಮನೆ ಕಟ್ಟಲು ತಯಾರಿ ಮಾಡುತ್ತಿದ್ದಾಗ ನಾನು ಈ ದಾವೆ ತಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಪಾಲಿಗೆ ಬಂದ ಕಟ್ಟಡದ ಪ್ಯಾಸೇಜಿನ ಜಾಗವನ್ನು ಅತಿಕ್ರಮಣ ಮಾಡಬೇಕೆಂಬ ಉದ್ದೇಶದಿಂದ ಈ ದಾವೆಯನ್ನು ತಂದಿರುತ್ತೇನೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ಸದ್ರಿ ಪ್ಯಾಸೇಜಿನ ಭಾಗದ ಮೇಲಂತಸ್ತಿನಲ್ಲಿ ಕಲ್ಲು ಕಟ್ಟಿ ಹಾಗೂ ಅದರ ಕೆಳ ಅಂತಸ್ತಿನಲ್ಲಿ ಬೀಗ ಹಾಕಿ ಪ್ರತಿವಾದಿಯ ಹಕ್ಕಿಗೆ ಧಕ್ಕೆ ತಂದಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯ ಹೊಸ ಕಟ್ಟಡದ ಸಂಪೂರ್ಣ ಕೆಲಸ ಆಗದೇ ಇರುವುದರಿಂದ ಮತ್ತು ಪ್ರತಿವಾದಿಯ ಸ್ಥಳದ ಪಶ್ಚಿಮಕ್ಕೆ ಇರುವ ಮತ್ತು ನನ್ನ ಸ್ಥಳದ ಪ್ಯಾಸೇಜಿನ ಪೂರ್ವಕ್ಕೆ ಇರುವ ಗೋಡೆಯನ್ನು ಇಲ್ಲಿಯ ತನಕ ಕೆಡವದೇ ಇರುವುದರಿಂದ ನನ್ನ ಪಾಲಿನ ಕಟ್ಟಡಕ್ಕೆ ಆತಂಕಪಡಿಸುವುದಾಗಲೀ ಅಥವಾ ಹಾನಿ ಮಾಡುವ ಪ್ರಮೇಯ ಉದ್ಭವ ಆಗುವುದಿಲ್ಲ ಎಂದರೆ ಸರಿಯಲ್ಲ. ಹಾಗೆ ಈ ನ್ಯಾಯಾಲಯದ ಮಧ್ಯಂತರ ಆದೇಶವನ್ನು ಉಲ್ಲಂಘಿಸುವ ಪ್ರಶ್ನೆ ಉದ್ಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಕುಟುಂಬದಲ್ಲಿ ಆದ ಪಾಲುಪಟ್ಟಿಯಂತೆ ಇರುವಂತಹ ಷರತ್ತುಗಳನ್ನು ಪಾಲನೆ ಮಾಡದೇ ಇದ್ದಾಗ ಪ್ರತಿವಾದಿ ಅದನ್ನು ಪ್ರಶ್ನಿಸಿದಾಗ ಹೇಗದರೂ ಮಾಡಿ ಪ್ರತಿವಾದಿಗೆ ಬುದ್ದಿ ಕಲಿಸಬೇಕು ಎಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ತಂದಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಪಾಲುಪಟ್ಟಿಯ ಷರತ್ತಿನಂತೆ ಪ್ರತಿವಾದಿಗೆ ನನ್ನ ಪಾಲಿಗೆ ಬಂದ ಅಂಗಡಿ ಮಳಿಗೆಗಳ ಉತ್ಪನ್ನದಲ್ಲಿ ಪ್ರತಿವಾದಿಗೆ ಪಾಲು ಕೊಡಬೇಕಿದ್ದರೂ ಸಹ ಇಲ್ಲಿಯವರೆಗೆ ನಾನು ಸದ್ರಿ ಪಾಲನ್ನು ಪ್ರತಿವಾದಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸಲು ಯಾವುದೇ ವಾದ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**